ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಜಾರಿಗೊಳಿಸಲಾಗುತ್ತಿರುವ ವಸತಿ ಯೋಜನೆಗಳ ಬಗ್ಗೆ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-

650 (841) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಪಿ.ಎಮ್.ಜಿ.ಎ.ವೈ., ವಾಜಪೇಯಿ, ಬಸವ, ರಾಜೀವ್ ಗಾಂಧಿ, ದೇವರಾಜ್ ಅರಸು, ಅಂಬೇಡ್ಕರ್, ಇಂದಿರಾ ಅವಾಜ್ ಮುಂತಾದ ಯೋಜನೆಗಳಡಿಯಲ್ಲಿ ವಸತಿ ರಹಿತರಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಿದೆ; (ಜಿಲ್ಲಾವಾರು ಮತ್ತು ಯೋಜನಾವಾರು ಮಾಹಿತಿ ನೀಡುವುದು)

(ಆ) ಈ ಹಲವಾರು ಯೋಜನೆಗಳಡಿಯಲ್ಲಿ ಕೈಗೊಂಡ ಮನೆಗಳ ನಿರ್ಮಾಣದ ಪ್ರಗತಿ ಯಾವ ಯಾವ ಹಂತದಲ್ಲಿ ;

(ಇ) ಫಲಾನುಭವಿಗಳಿಗೆ 3 ತಿಂಗಳ ಒಳಗೆ ಮನೆಗಳ ನಿರ್ಮಾಣ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಷರತ್ತುನ್ನು ಪೂರೈಸದೆ ಇರುವ ಪ್ರಕರಣಗಳು ಎಷ್ಟು ಮತ್ತು ಎಷ್ಟು ಪ್ರಕರಣಗಳಲ್ಲಿ ಮಂಜೂರಾತಿಯನ್ನು ರದ್ದುಮಾಡಲಾಗಿದೆ; (ಜಿಲ್ಲಾವಾರು ಮತ್ತು ಯೋಜನಾವಾರು ಮಾಹಿತಿ ನೀಡುವುದು)

(ಈ) ಫಲಾನುಭವಿಗಳು ಯಾವ ಯಾವ ಕಾರಣದ ಹಿನ್ನಲೆಯಲ್ಲಿ ಮನೆಗಳ ನಿರ್ಮಾಣ ಕೈಗೊಳ್ಳಲು ಸಾಧ್ಯವಾಗದ ಬಗ್ಗೆ ಸರ್ಕಾರ ಅಧ್ಯಯನ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಸಕಾರಣವಿದ್ದು ಮತ್ತು ಫಲಾನುಭವಿಗಳ ಸಾಮರ್ಥ್ಯ ಮೀರಿ ಉದ್ಭವಿಸಿರುವ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಮಂಜೂರಾತಿ ರದ್ದು ಮಾಡಿರುವುದು ಸರಿಯಾದ ಕ್ರಮವೇ; ಈ ಹಿನ್ನಲೆಯಲ್ಲಿ ಸರ್ಕಾರ ವಿಧಿಸಿರುವ ಷರತ್ತುಗಳನ್ನು ಸಡಿಲಗೊಳಿಸಲು ಪುನರ್ ಪರಿಶೀಲಿಸುವುದೇ? (ಸ್ಪಷ್ಟ ಮತ್ತು ನಿಖರವಾದ ಉತ್ತರ ನೀಡುವುದು)